# ಕರ್ನಾಟಕ ವಿಧಾನ ಪರಿಷತ್

| | | |
|---|---|---|
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | : | 136 |
| ಸದಸ್ಯರ ಹೆಸರು | : | ಶ್ರೀ ಐವನ್ ಡಿ'ಸೋಜಾ (ನಾಮನಿರ್ದೇಶಿತ ಹೊಂದಿದವರು) |
| ಉತ್ತರಿಸಬೇಕಾದ ದಿನಾಂಕ | : | 10-07-2018 |
| ಉತ್ತರಿಸುವ ಸಚಿವರು | : | ಮಾನ್ಯ ನಗರಾಭಿವೃದ್ಧಿ ಹಾಗೂ ವಸತಿ ಸಚಿವರು |

| ಕ್ರ ಸಂ. | ಪ್ರಶ್ನೆ | ಉತ್ತರ |
|---|---|---|
| ಅ) | ಮಂಗಳೂರು ನಗರಾಭಿವೃದ್ಧಿ ಪ್ರಾಧಿಕಾರದಲ್ಲಿ ನಿವೇಶನಗಳನ್ನು ರಚಿಸಲು ಖರೀದಿಸಲಾದ ಭೂಮಿಯಲ್ಲಿ ಅವ್ಯವಹಾರಗಳಾಗಿದ್ದು, ಈ ಬಗ್ಗೆ ಸರ್ಕಾರ ಕೈಗೊಂಡಿರುವ ಕ್ರಮಗಳೇನು; ವಿಲೇ ಹಣವನ್ನು ವಿನಿಯೋಗಿಸಲಾಗಿದೆಯೇ; ಯಾವ ವರ್ಷದಲ್ಲಿ ಭೂಮಿ ಖರೀದಿಸಲಾಗಿದೆ ನಿವೇಶನಗಳನ್ನು ವಿತರಿಸದೇ ಇರಲು ಕಾರಣಗಳೇನು; ಪ್ರಾಧಿಕಾರಕ್ಕೆ ಆಗಿರುವ ನಷ್ಟ ಎಷ್ಟು; (ವಿವರ ನೀಡುವುದು) | ಜಮೀನು ಖರೀದಿಯಲ್ಲಿ ಅವ್ಯವಹಾರಗಳ ಬಗ್ಗೆ ತನಿಖೆ ನಡೆಸಲು ಸರಕಾರದಿಂದ ಮೈಸೂರು ಪ್ರಾದೇಶಿಕ ಆಯುಕ್ತರ ಅಧ್ಯಕ್ಷತೆಯಲ್ಲಿ ಜಿಲ್ಲಾಧಿಕಾರಿಗಳು, ದ.ಕ. ಮತ್ತು ಭೂದಾಖಲೆಗಳ ಉಪನಿರ್ದೇಶಕರು, ದ.ಕ. ಮಂಗಳೂರು ಇವರನ್ನು ಒಳಗೊಂಡ ಸದಸ್ಯರುಗಳ ಉನ್ನತ ಮಟ್ಟದ ತನಿಖಾ ಸಮಿತಿಯನ್ನು ರಚಿಸಿದ್ದು, ಸಮಿತಿಯಿಂದ ಅಂತಿಮ ತನಿಖಾ ವರದಿಯನ್ನು ಸರ್ಕಾರಕ್ಕೆ ಸಲ್ಲಿಸಲಾಗಿದ್ದು. ಈ ಪ್ರಕರಣದಲ್ಲಿನ ಅವ್ಯವಹಾರದಲ್ಲಿ ಭಾಗಿಯಾಗಿರುವ ಅಧಿಕಾರಿಗಳ / ನೌಕರರ ಮಾಹಿತಿ ಪಡೆದು ಅವರುಗಳ ವಿರುದ್ಧದ ಆರೋಪಗಳ ಕುರಿತು ನಿಯಮಾನುಸಾರ ಕ್ರಮಜರುಗಿಸಲು ಪರಿಶೀಲಿಸಲಾಗುತ್ತಿದೆ.<br>ಚೇಳ್ಯಾರು ಮತ್ತು ಮಧ್ಯ ಗ್ರಾಮಗಳಲ್ಲಿ ಒಟ್ಟು 72 ಎಕರೆ 83.50 ಸೆಂಟ್ಸ್ ಜಮೀನನ್ನು ಕರ್ನಾಟಕ ನಗರಾಭಿವೃದ್ಧಿ ಪ್ರಾಧಿಕಾರಗಳ ಕಾಯ್ದೆಯ ಕಲಂ 35 ರಂತೆ ಖರೀದಿ ಮಾಡಲಾಗಿರುತ್ತದೆ. ಖರೀದಿ ಸಂಬಂಧ ಒಟ್ಟು ರೂ. 20,07,40,873.00ನ್ನು ಭೂಮೌಲ್ಯವಾಗಿ ಭೂಮಾಲೀಕರಿಗೆ ಪಾವತಿಸಲಾಗಿದೆ.<br>ಸದರಿ ಭೂಮಿಯನ್ನು 2010-11 ನೇ ಸಾಲಿನಲ್ಲಿ ಖರೀದಿ ಮಾಡಲಾಗಿದೆ. ಉನ್ನತ ಮಟ್ಟದ ತನಿಖಾ ಸಮಿತಿಯ ವರದಿ ಮೇಲೆ ಅಂತಿಮ ಆದೇಶ ಆಗಿಲ್ಲವಾದ್ದರಿಂದ ಒಟ್ಟು ಖರೀದಿ ಜಮೀನಿನ ಪೈಕಿ ಪ್ರಥಮ ಹಂತದಲ್ಲಿ 46.85 ಎಕರೆ ಜಮೀನಿನಲ್ಲಿ ಸುಮಾರು 592 ನಿವೇಶನಗಳುಳ್ಳ ವಸತಿ ಬಡಾವಣೆ ಯೋಜನಾ ನಕ್ಷೆ ತಯಾರಿಸಿ ಸರ್ಕಾರದ ಅನುಮೋದನೆ ಕೋರಿ ಮಂಗಳೂರು ನಗರಾಭಿವೃದ್ಧಿ ಪ್ರಾಧಿಕಾರದಿಂದ ಪ್ರಸ್ತಾವನೆ ಸಲ್ಲಿಸಲಾಗಿದೆ, ಸದರಿ ಪ್ರಸ್ತಾವನೆಯನ್ನು ಸರ್ಕಾರದಲ್ಲಿ ಪರಿಶೀಲಿಸಲಾಗುತ್ತಿದೆ. |
| ಆ) | ಮಂಗಳೂರು ನಗರಾಭಿವೃದ್ಧಿ ಪ್ರಾಧಿಕಾರ ಭೂಮಾಲೀಕರಿಗೆ ಹಣ ನೀಡಿದ್ದರೂ ಭೂಮಿಯನ್ನು ನೋಂದಾಯಿಸಿಕೊಳ್ಳದೆ ನಗರಾಭಿವೃದ್ಧಿ ಪ್ರಾಧಿಕಾರಕ್ಕೆ ಕೋಟ್ಯಾಂತರ ರೂಪಾಯಿ ನಷ್ಟ ಉಂಟಾಗಿದ್ದು ಈ ಬಗ್ಗೆ ಕ್ರಮ ಕೈಗೊಳ್ಳದಿರಲು ಕಾರಣಗಳೇನು; | ಖರೀದಿ ಮಾಡಿದ ಒಟ್ಟು 72 ಎಕರೆ 83.50 ಸೆಂಟ್ಸ್ ಪೈಕಿ 70 ಎಕರೆ 90.50 ಸೆಂಟ್ಸ್ ಜಮೀನ ನ್ನು ಪ್ರಾಧಿಕಾರದ ಹೆಸರಿನಲ್ಲಿ ಆರ್.ಟಿ.ಸಿ. ದಾಖಲಾಗಿರುತ್ತದೆ. ಹಾಗೂ ಉಳಿದ 1 ಎಕರೆ 93 ಸೆಂಟ್ಸ್ ಜಮೀನಿನ ಕ್ರಯಪತ್ರವನ್ನು ನೋಂದಣಿ ಬಗ್ಗೆ ಮುಲ್ಕಿ ನೋಂದಣಿ ಕಛೇರಿಯಲ್ಲಿ ಹಾಜರುಪಡಿಸಿದ್ದು, ಭೂಮಾಲೀಕರಿಂದ ಕೆಲವು |

| | | |
|---|---|---|
| | | ದಾಖಲೆಗಳು ಸಲ್ಲಿಸಲು ಬಾಕಿ ಇರುವುದರಿಂದ ನೋಂದಣಿ ಆಗಿರುವುದಿಲ್ಲ. ಈ ಜಮೀನಿನ ಭೂಮೌಲ್ಯ ಹಾಗೂ ನೋಂದಣಿ ಶುಲ್ಕ ಸೇರಿ ಒಟ್ಟು ರೂ. 52,55,312.00 ನ್ನು ವೆಚ್ಚ ಮಾಡಲಾಗಿದೆ. ನೋಂದಣಿ ಕಛೇರಿಗೆ ಸೂಕ್ತ ದಾಖಲೆ ಗಳನ್ನು ಒದಗಿಸಿ ಈಗಾಗಲೇ ಹಾಜರುಪಡಿಸಲಾದ ಕ್ರಯ ಪತ್ರವನ್ನು ನೋಂದಣಿ ಮಾಡಲು ಕ್ರಮ ವಹಿಸುವಂತೆ ಸದರಿ ಶ್ರೀ ಅನಂತ ಕಾಮತ್ ಇವರಿಗೆ ನೋಟೀಸು ನೀಡಿದ್ದು, ಅವರು ಯಾವುದೇ ದಾಖಲೆ ನೀಡಿಲ್ಲವಾದ್ದರಿಂದ ಸದರಿಯವರ ಮೇಲೆ ಕ್ರಿಮಿನಲ್ ಕೇಸನ್ನು (FIR) ಉರ್ವಾ ಆರಕ್ಷಕ ಠಾಣೆಯಲ್ಲಿ ದಾಖಲು ಮಾಡಲಾಗಿದೆ. ಸದರಿ ಶ್ರೀ ಅನಂತ್ ಕಾಮತ್ ರವರ ಹಕ್ಕಿನಲ್ಲಿರುವ ಮಧ್ಯ ಗ್ರಾಮದಲ್ಲಿ 21 ಎಕ್ರೆ 02.75 ಸೆಂಟ್ಸ್ ಮತ್ತು ದೇರೆಬೈಲು ಗ್ರಾಮದ 44 ಸೆಂಟ್ಸ್ ಜಮೀನನ್ನು ಮುಟ್ಟುಗೋಲು ಹಾಕಿಕೊಳ್ಳಲು ಪೂರ್ವಭಾವಿಯಾಗಿ ಆರ್.ಟಿ.ಸಿ ಯ ಕಲಂ 11 ರಲ್ಲಿ ಅಡಮಾನದ ಹಕ್ಕು ದಾಖಲು ಮಾಡಲಾಗಿದೆ. |
| ಇ) | 2016-17 ಮತ್ತು 2017-18ನೇ ಸಾಲಿನಲ್ಲಿ ಮಂಗಳೂರು ನಗರಾಭಿವೃದ್ಧಿ ಪ್ರಾಧಿಕಾರದಲ್ಲಿ ಎಷ್ಟು ಅರ್ಹರಿಗೆ ನಿವೇಶನಗಳನ್ನು ಹಂಚಲಾಗಿದೆ; ನಗರಾಭಿವೃದ್ಧಿ ಪ್ರಾಧಿಕಾರ ಕಾರ್ಯಚಟುವಟಿಕೆಗಳಿಲ್ಲದೆ ನಿಷ್ಕ್ರೀಯಗೊಂಡಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; ಈ ಬಗ್ಗೆ ಸರ್ಕಾರ ಕೈಗೊಂಡಿರುವ ಕ್ರಮಗಳೇನು; (ವಿವರ ನೀಡುವುದು) | 2016-17ನೇ ಸಾಲಿನಲ್ಲಿ ಪದವು ಗ್ರಾಮದಲ್ಲಿ ರಚಿಸಿರುವ ಎಸ್.ಟಿ.ಎಫ್. ಸಿಬ್ಬಂದಿ ಬಡಾವಣೆಯಲ್ಲಿ ಹಂಚಿಕೆಗಾಗಿ ಬಾಕಿ ಇದ್ದ 3 ನಿವೇಶನಗಳನ್ನು ಮತ್ತು 2017-18ನೇ ಸಾಲಿನಲ್ಲಿ 2 ನಿವೇಶನಗಳನ್ನು ಹಂಚಿಕೆ ಮಾಡಲಾಗಿದೆ.<br>ಪ್ರಾಧಿಕಾರದ ವಸತಿ ಬಡಾವಣೆ ಹಾಗೂ ವಾಣಿಜ್ಯ ಸಂಕೀರ್ಣ ನಿರ್ಮಾಣ ಯೋಜನೆ ಬಗ್ಗೆ ಖಾಸಗಿ ಭೂಮಾಲೀಕರಿಗೆ ಸೇರಿದ ಕುಂಜತ್ತ ಬೈಲು ಗ್ರಾಮದ ಸ.ನಂ: 6/1 ಮತ್ತಿತರರಲ್ಲಿನ ಒಟ್ಟು 17.49 ಎಕರೆ ಜಮೀನನ್ನು ಕಲಂ 35 ರಂತೆ ಖರೀದಿ ಮಾಡಲು ಅನುಮೋದನೆ ಕೋರಿ ಆಯುಕ್ತರು, ನಗರಾಭಿವೃದ್ಧಿ ಪ್ರಾಧಿಕಾರ ಮಂಗಳೂರು ಇವರು ಸರ್ಕಾರಕ್ಕೆ ಪ್ರಸ್ತಾವನೆ ಸಲ್ಲಿಸಿರುತ್ತಾರೆ. ಸದರಿ ಪ್ರಸ್ತಾವನೆಯನ್ನು ನಿಯಮಾನುಸಾರ ಪರಿಶೀಲಿಸಲಾಗುತ್ತಿದೆ.<br>ಮಂಗಳೂರು ನಗರಾಭಿವೃದ್ಧಿ ಪ್ರಾಧಿಕಾರ ನಿಷ್ಕ್ರೀಯಗೊಂಡಿರುವುದಿಲ್ಲ. ಪ್ರಾಧಿಕಾರದ ವಸತಿ ಬಡಾವಣೆ ಯೋಜನೆ ಬಗ್ಗೆ ಬಜಪೆ ಗ್ರಾಮದ ಸ.ನಂ: 98/5ಎ ರಲ್ಲಿ 7.14 ಎಕರೆ ಖಾಸಗಿ ಭೂಮಾಲೀಕರಿಗೆ ಸೇರಿದ ಜಮೀನನ್ನು ಕಲಂ 35 ರಂತೆ ಖರೀದಿಸಲು ಸರಕಾರಕ್ಕೆ ಪ್ರಸ್ತಾವನೆ ಸಲ್ಲಿಸಿದ್ದು, ಸದರಿ ಪ್ರಸ್ತಾವನೆಯನ್ನು ನಿಯಮಾನುಸಾರ ಪರಿಶೀಲಿಸಲಾಗುತ್ತಿದೆ. ಇದರಿಂದ ಮಂಗಳೂರು ನಗರಾಭಿವೃದ್ಧಿ ಪ್ರಾಧಿಕಾರ ನಿಷ್ಕ್ರೀಯಗೊಂಡಿರುವುದಿಲ್ಲ. |
| ಈ) | 2016-17 ಮತ್ತು 2017-18 ರಲ್ಲಿ ಮಂಗಳೂರು ನಗರಾಭಿವೃದ್ಧಿ ಪ್ರಾಧಿಕಾರ ಕೈಗೊಂಡ ಅಭಿವೃದ್ಧಿ ಕಾರ್ಯಕ್ರಮಗಳಾವುವು; ಇದಕ್ಕೆ ತಗಲಿದ ಮೊತ್ತ | 1. 2016-17 ಮತ್ತು 2017-18 ರಲ್ಲಿ ಮಂಗಳೂರು ತಾಲೂಕು ಬೋಳೂರು ಗ್ರಾಮದ ಉರ್ವಾ ಮಾರ್ಕೆಟ್ ವಾಣಿಜ್ಯ ಸಂಕೀರ್ಣವನ್ನು ರೂ. 11.72 ಕೋಟಿ ವೆಚ್ಚದಲ್ಲಿ |

| | | |
|---|---|---|
| | ಎಷ್ಟು; ಸರ್ಕಾರದಿಂದ ದೊರೆತ ಹಣ ಎಷ್ಟು; (ವಿವರ ನೀಡುವುದು) | ನಿರ್ಮಾಣ ಮಾಡಲು ಕಾಮಗಾರಿ ಕೈಗೊಂಡಿದ್ದು, ಶೇಕಡ 80 ರಷ್ಟು ಕಾಮಗಾರಿ ಪೂರ್ಣ ಗೊಂಡಿರುತ್ತದೆ. ಇದರ ಬಗ್ಗೆ ಪ್ರಾಧಿಕಾರದಿಂದ ಈವರೆಗೆ ರೂ. 11.23 ಕೋಟಿಯನ್ನು ವೆಚ್ಚ ಮಾಡಲಾಗಿದೆ.<br>2. ಮಂಗಳೂರು ತಾಲೂಕು ಕದ್ರಿ ಉದ್ಯಾನವನದ ಬಳಿ ಹಳೇ ಜಿಂಕೆ ಉದ್ಯಾನವನದ ವಾಯು ವಿಹಾರ, ಪಾದಚಾರಿ ಪಥ, ಲೇಸರ್ ಶೋ, ಸಂಗೀತ ಕಾರಂಜಿ ಯೋಜನೆಯನ್ನು ಒಟ್ಟು ರೂ. 4.58 ಕೋಟಿ ವೆಚ್ಚದಲ್ಲಿ ನಿರ್ಮಾಣ ಮಾಡಲಾಗಿದೆ. ಸದ್ರಿ ವೆಚ್ಚದಲ್ಲಿ ಎಸ್.ಎಫ್.ಸಿ. ಯೋಜನೆಯಡಿಯಲ್ಲಿ ಸರಕಾರದಿಂದ ರೂ. 4.97 ಕೋಟಿ ಅನುದಾನ ನೀಡಿದ್ದು, ಉಳಿಕೆ ರೂ. 61.00 ಲಕ್ಷವನ್ನು ಪ್ರಾಧಿಕಾರದ ನಿಧಿಯಿಂದ ಭರಿಸಲಾಗಿದೆ.<br>3. ಮಂಗಳೂರು ತಾಲೂಕು ಅಳಪೆ ಗ್ರಾಮದ ಬೈಲಾಡಿ ಕೆರೆಯನ್ನು ರೂ. 1.65 ಕೋಟಿ ವೆಚ್ಚದಲ್ಲಿ ಅಭಿವೃದ್ಧಿ ಪಡಿಸಲು ಕ್ರಮ ಕೈಗೊಳ್ಳಲಾಗಿದ್ದು, ಟೆಂಡರು ಪ್ರಕ್ರಿಯೆಯಲ್ಲಿದೆ.<br>4. ಮಂಗಳೂರು ತಾಲೂಕು ಅಂಬ್ಲಮೊಗರು ಗ್ರಾಮದ ಸ.ನಂ: 17/27 ರಲ್ಲಿ ಇರುವ ಹಾಲಿ ಕೆರೆಯನ್ನು ರೂ. 24.98 ಲಕ್ಷ ವೆಚ್ಚದಲ್ಲಿ ಅಭಿವೃದ್ಧಿಪಡಿಸಲು ಕ್ರಮ ಕೈಗೊಳ್ಳಲಾಗಿದ್ದು, ಕಾಮಗಾರಿಯು ಪ್ರಗತಿಯಲ್ಲಿದೆ. |
| ಉ) | ಅವ್ಯವಹಾರದ ಬಗ್ಗೆ ಸರ್ಕಾರ ತನಿಖೆಗೆ ಆದೇಶ ನೀಡಲಾಗಿದೆಯೇ; ಸಂಬಂಧಪಟ್ಟವರನ್ನು ಅಮಾನತ್ತು ಮಾಡಲಾಗುವುದೇ? | ಈ ಪ್ರಕರಣದಲ್ಲಿನ ಅವ್ಯವಹಾರದಲ್ಲಿ ಭಾಗಿಯಾಗಿರುವ ಅಧಿಕಾರಿಗಳ / ನೌಕರರ ಮಾಹಿತಿ ಪಡೆದು ಅವರುಗಳ ವಿರುದ್ಧದ ಆರೋಪಗಳ ಕುರಿತು ನಿಯಮಾನುಸಾರ ಕ್ರಮ ಜರುಗಿಸಲು ಪರಿಶೀಲಿಸಲಾಗುತ್ತಿದೆ. |

**ಸಂಖ್ಯೆ: ನಅಇ 235 ಮೈಅಪ್ರಾ 2018**

(ಯು.ಟಿ.ಖಾದರ್)
ನಗರಾಭಿವೃದ್ಧಿ ಮತ್ತು ವಸತಿ ಸಚಿವರು,